# ಎಲ್ಲರ ಮನೆ ಕಥೆಯೇ ಧಾರಾವಾಹಿ

■ ರಾಘವೇಂದ್ರ ಕೆ.



ಚಂದನ ರಾಘವೇಂದ್ರ ಝೀ ಕನ್ನಡದ 'ಶ್ರೀರಸ್ತು ಶುಭಮಸ್ತು'ನ ಸಿರಿ

◆ ನಿಮ್ಮ ಪಾತ್ರ ಹೇಗಿದೆ? ವೈಯಕ್ತಿಕವಾಗಿ ನಿಮಗೆ ಹೇಗೆನಿಸುತ್ತಿದೆ?

ತುಳಸಿ ಚಿಕ್ಕ ವಯಸ್ಸಿನಲ್ಲೇ ಪತಿಯನ್ನು ಕಳೆದುಕೊಳ್ಳುತ್ತಾರೆ. ಮಾವನ ಆಶ್ರಯದಲ್ಲಿಯೇ ಮಗ ಮತ್ತು ಮಗಳನ್ನು ಸಾಕುತ್ತಾರೆ. ಪ್ರಾಯಕ್ಕೆ ಬಂದ ಮಗಳು ಪ್ರೇಮಿಸಿದ ಹುಡುಗನ ಜೊತೆ ಮನೆ ಬಿಟ್ಟು ಹೋಗುತ್ತಾಳೆ. ತನ್ನ ಖಾಸಗಿ ಬದುಕು ಅವರಿಗೆ ಮುಖ್ಯ ಆಗುವುದೇ ಇಲ್ಲ. ಮಾವ ಮಗನ ಆರೈಕೆಯೇ ಆದ್ಯತೆ ಆಗಿರುತ್ತದೆ. ಇದೇ ಸಮಯದಲ್ಲಿ ಸಿರಿ ಪ್ರವೇಶ ಮಾಡುತ್ತಾಳೆ. ಆ ಪಾತ್ರ ಸಣ್ಣ ಪುಟ್ಟ ಆಸೆಗಳನ್ನು ಅನುಭವಿಸಬೇಕು ಎನ್ನುವುದನ್ನು ತುಳಸಿಗೆ ತಿಳಿಸುತ್ತಾಳೆ. ನಾನು ಚಂದನ ಆಗಿ ಹೇಳುವುದಾದರೆ, ಸಿರಿಯ ವ್ಯಕ್ತಿತ್ವಕ್ಕೆ ಹೊಂದಿಕೆಯಾಗುವೆ. ಸಂಪ್ರದಾಯಸ್ಥ ಕುಟುಂಬ ನಮ್ಮದು. ಆದರೂ ನಾನು ಯಾವುದನ್ನೂ ತರ್ಕಬದ್ಧ ಯೋಚಿಸದೆ ಒಪ್ಪುವುದೇ ಇಲ್ಲ. ಎಲ್ಲದಕ್ಕೂ ಕಾರಣ ಗೊತ್ತಾಗಬೇಕು. ಅಂಧಕಾರ ಇರಬಾರದು. ಸಣ್ಣ ಸಣ್ಣ ಸಂಗತಿಗಳನ್ನೂ ಖುಷಿಯಿಂದ ಸಂಭ್ರಮಿಸುವೆ.

◆ ನಟನೆಗೆ ಪ್ರೇರಣೆ ಸಿಕ್ಕಿದ್ದು ಹೇಗೆ? ನಿಮಗೆ ಆದರ್ಶ ಯಾರು?

ಕಾಫಿ ಡೇನಲ್ಲಿ ಒಮ್ಮೆ ನಾವು 'ಡಮ್ ಶರೇಡ್ಸ್' (dumb charades) ಆಡ್ತಾ ಇದ್ದೆವು. ನಿರ್ದೇಶಕ ರಾಜೇಶ್ ರಾಮಕೃಷ್ಣನ್ ಅದನ್ನು ನೋಡಿ ನಿಮ್ಮ ನಟನೆಯ ಕೌಶಲ್ಯ ಚೆನ್ನಾಗಿದೆ. ಒಮ್ಮೆ ಪ್ರಯತ್ನ ಮಾಡಿ. ಹೊಸ ಮುಖಗಳಿಗೆ ಹುಡುಕುತ್ತಿರುವುದಾಗಿ ಹೇಳಿದರು. ಅಲ್ಲಿಂದ ನನ್ನ ನಟನೆಯ ಪಯಣ ಆರಂಭ ಆಯಿತು. ಅದಾದ ನಂತರ 'ರಾಜು ಕನ್ನಡ ಮೀಡಿಯಂ' ಮಾಡಿದೆ. ಸ್ಟಾರ್ ಸುವರ್ಣದಲ್ಲಿ 'ಸಿಂಧೂರ' ಮೂಲಕ ಕಿರುತೆರೆಗೆ ಬಂದೆ. ಮತ್ತೆ 'ಏಪ್ರಿಲ್‌ನ ಹಿಮ ಬಿಂದು' ಸೇರಿ ಕೆಲವು ಸಿನಿಮಾಗಳಲ್ಲಿ ಮಾಡಿದೆ. ಝೀ ಕನ್ನಡದಿಂದ 'ಸಿರಿ' ಪಾತ್ರಕ್ಕೆ ಕರೆ ಬಂತು.

◆ ಸೀರಿಯಲ್‌ನಲ್ಲಿ ಮಹಿಳೆ ನೀಚಳಾಗಿರಬೇಕು, ಇಲ್ಲವೇ ಸೇವಕಿಯಂತೆ ಇರಬೇಕು ಏಕೆ?

ನಮ್ಮ ನಮ್ಮ ಕುಟುಂಬಗಳನ್ನೇ ನೋಡಿದರೂ ಅದು ಗೊತ್ತಾಗುತ್ತದೆ. ನಾನು ಸಂಪ್ರದಾಯಸ್ಥ ಕೂಡು ಕುಟುಂಬದಿಂದ ಬಂದಿದ್ದೇನೆ. ತುಳಸಿ ಅಂತಹವರು ನಮ್ಮ ಸುತ್ತ ಕಾಣುವ ಎಲ್ಲ ಕುಟುಂಬದಲ್ಲೂ ಇದ್ದೇ ಇರುತ್ತಾರೆ. ನಮ್ಮ ತಾಯಿ, ಅಜ್ಜಿ ಅಂತಹವರೇ ಆಗಿರುತ್ತಾರೆ. ತಮ್ಮ ಆಸೆ ಆಕಾಂಕ್ಷೆಗಿಂತ ಕುಟುಂಬದ ಸದಸ್ಯರ ಅಗತ್ಯಗಳಿಗೆ ಪ್ರಾಮುಖ್ಯ ಕೊಡ್ತಾ ಇದ್ದರು. ತನ್ನ ಗಂಡ, ತಂದೆ, ತಾಯಿ, ಅತ್ತೆ, ಮಾವ, ಮಕ್ಕಳೇ ಅವರಿಗೆ ಮುಖ್ಯ. ಹಾಗಾಗಿ ತಮ್ಮನ್ನು ತಾವು ಕಳೆದುಕೊಳ್ಳುತ್ತಾರೆ. ಅದನ್ನು ಸೇವಕಿ ಅಂತ ಹೇಳಲು ಆಗದು. ಬಯಸಿ ಅದನ್ನು ಮಾಡುತ್ತಾರೆ.

ಅದೇ ಕುಟುಂಬದಲ್ಲಿ ಒಬ್ಬೊಬ್ಬರ ಗುಣ ಒಂದೊಂದು ರೀತಿ ಇರುತ್ತದೆ. ಅದರಲ್ಲಿ ಕೆಲವರ ಗುಣ ಸ್ವಾರ್ಥ, ವಂಚನೆ, ನೆಗೆಟಿವ್ ಆಗಿರುತ್ತದೆ. ಇವೆಲ್ಲ ನೋಡಿರುವ ಪಾತ್ರಗಳೇ. ಕುಟುಂಬದಲ್ಲಿ ಇರುವಂಥದ್ದನ್ನೇ ಧಾರಾವಾಹಿಯಲ್ಲೂ ತೋರಿಸುತ್ತಾರೆ. ಆಗ ಮಾತ್ರ ಎಲ್ಲರಿಗೂ ಸ್ಪಂದಿಸುತ್ತದೆ.

◆ ಯಾವ ರೀತಿಯ ಪಾತ್ರ ಇಷ್ಟ ಆಗುತ್ತದೆ?

ನಾನು ಅಲ್ಲದ ಪಾತ್ರವನ್ನು ನಿರ್ವಹಿಸುವುದು ನನಗೆ ಇಷ್ಟ. ಮೊದಲ ಧಾರಾವಾಹಿಯಲ್ಲಿ ದ್ವಿ ಪಾತ್ರವನ್ನು ನಿರ್ವಹಿಸಿದ್ದೆ. ಅದರಲ್ಲಿ ಒಬ್ಬಳು ಸೌಮ್ಯ ಗುಣದವಳು ಮತ್ತೊಬ್ಬಳು ಬಜಾರಿ. ನಂತರದ ಧಾರಾವಾಹಿಯಲ್ಲಿ ನೆಗೆಟಿವ್ ಲೀಡ್ ಮಾಡಿದೆ. ಬೇರೆ ಬೇರೆ ಪಾತ್ರಗಳನ್ನು ಮಾಡಿದಾಗ ಒಂದು ಪಾತ್ರದಿಂದ ಮತ್ತೊಂದು ಪಾತ್ರಕ್ಕೆ ಭಿನ್ನ ಭಿನ್ನ ಅನುಭವ ಆಗುತ್ತದೆ. ಸಿನಿಮಾ–ಧಾರಾವಾಹಿಯಲ್ಲಿ ನಟನೆಯಲ್ಲಿ ವ್ಯತ್ಯಾಸ ಇರುವುದಿಲ್ಲ. ಎರಡಕ್ಕೂ ಅದರದ್ದೇ ಆದ ತೂಕ ಇರುತ್ತದೆ.

◆ ದೇಹ–ಮನಸ್ಸಿನ ಆರೋಗ್ಯ ಮತ್ತು ಚೈತನ್ಯದಿಂದ ಇರಲು ಏನು ಮಾಡುತ್ತೀರಿ?

ನಾನು ಬೆಳಿಗ್ಗೆ ನಾಲ್ಕುವರೆಗೆ ಎದ್ದೇಳುತ್ತೇನೆ. ಅಲ್ಲಿಂದ ದಿನ ಆರಂಭವಾಗುತ್ತದೆ. ಸೀರಿಯಲ್‌ನಲ್ಲಿ ದಿನದಲ್ಲಿ ಎಂಟು ಹತ್ತು ಗಂಟೆ ಕಳೆದು ಹೋಗುತ್ತದೆ. ಡಯಟ್–ವ್ಯಾಯಾಮಕ್ಕೆ ಸಮಯ ಸಿಗುವುದೇ ಇಲ್ಲ. ಇರುವುದರಲ್ಲೇ ಸಮಯವನ್ನು ಹೊಂದಿಸಿಕೊಂಡು ಮಾಡುತ್ತೇನೆ. ಜೀವನ ಶೈಲಿಯನ್ನೇ ಅದಕ್ಕೆ ಹೊಂದಿಸಿಕೊಂಡಿದ್ದೇನೆ. ಆದಷ್ಟು ಲಘು, ಪೌಷ್ಟಿಕ ಆಹಾರ ಸೇವನೆ ಮಾಡುವುದು ಖುಷಿ ಕೊಡುತ್ತದೆ. ಸಮಯ ವ್ಯರ್ಥ ಮಾಡುವುದೇ ಇಲ್ಲ. ಚಿತ್ರೀಕರಣದ ಬಿಡುವಿನ ವೇಳೆ ಕೂಡ ವಾಕ್ ಮಾಡುತ್ತೇನೆ. ನಿತ್ಯ ಬೆಳಿಗ್ಗೆ ಸ್ವಲ್ಪ ಹೊತ್ತು ವ್ಯಾಯಾಮ ಮಾಡುತ್ತೇನೆ.

◆ ವೃತ್ತಿ ಬದುಕಿನ ಸ್ಮರಣೀಯ ಘಟನೆಗಳ ಬಗ್ಗೆ ಹೇಳಿ.

ಕಹಿ ನೆನಪುಗಳು ಇಲ್ಲವೇ ಇಲ್ಲ. ಪ್ರತಿ ಪ್ರಾಜೆಕ್ಟ್‌ನಲ್ಲಿ ಭಿನ್ನ ಅನುಭವ ಆಗಿದೆ. ಎಲ್ಲದೂ ನನಗೆ ಒಳ್ಳೆಯದನ್ನೇ ಮಾಡಿದೆ. ಸಿನಿಮಾದಲ್ಲಿ ಅವಧಿ ಕಡಿಮೆ ಇರುತ್ತದೆ. ಧಾರಾವಾಹಿಯಲ್ಲಿ ವರ್ಷಗಟ್ಟಲೆ ಮಾಡುತ್ತೇವೆ. ಇಲ್ಲಿ ಸ್ಟಾರ್ ಅಂತ ಏನೂ ಇರುವುದಿಲ್ಲ. ಮುಖ್ಯವಾದ ದೃಶ್ಯ ಇದ್ದಾಗ ಎಲ್ಲರೂ ಖುಷಿ ಮತ್ತು ಜಾಗ್ರತೆಯಿಂದ ನಿರ್ವಹಿಸುತ್ತೇವೆ. ನಮ್ಮದೇ ನಿರ್ಮಾಣ ಸಂಸ್ಥೆಯ ಮೂಲಕ 'ರಾಮಾಚಾರಿ 2.0' ಸಿನಿಮಾ ಮಾಡಿದ್ದೇವೆ. ಸದ್ಯದಲ್ಲಿಯೇ 'ಸ್ಟೋರಿ ಆಫ್ ಡಿಮ್' (GOD) ಮಾಡುತ್ತೇವೆ. ಅದನ್ನು ದೊಡ್ಡ ಮಟ್ಟದಲ್ಲಿ ಮಾಡುವ ಉದ್ದೇಶ ಇದೆ. ■